# ಕುಮಾರವ್ಯಾಸ ಭಾರತದ ಕರ್ಣನ ಮಾನವೀಯ ಮೌಲ್ಯಗಳು

ಮಹಾಲಿಂಗಪ್ರಭು

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ದಯಾನಂದ ಸಾಗರ್ ಬಿಸಿನೆಸ್ ಅಕಾಡೆಮಿ, ಬೆಂಗಳೂರು.

DOI: https://doi.org/10.5281/zenodo.17487113

## ABSTRACT:

ಕುಮಾರವ್ಯಾಸ ಭಾರತದಲ್ಲಿ ಅನೇಕ ಮಹಾಪುರುಷರು ತಮ್ಮದೇ ಆದ ತೇಜಸ್ಸಿನಿಂದ ಕಂಗೊಳಿಸಿದ್ದರೂ ಬೇರೆಯವರಲ್ಲಿ ಕಾಣಲಾಗದ ವಿಶಿಷ್ಟವಾದ ಜ್ಞಾನ, ಮಾನವೀಯತೆ ಮತ್ತು ಕರುಣೆ ಹಾಗೂ ಸ್ನೇಹ ಹಾಗೂ ಸ್ವಾಮಿಭಕ್ತಿ ಎಲ್ಲಿಯೂ ಕೂಡ ದಕ್ಕೆ ಬರದ ಹಾಗೆ ನಡೆದುಕೊಳ್ಳುತ್ತಾನೆ. ಕುಮಾರವ್ಯಾಸನ ದೃಷ್ಟಿಯಲ್ಲಿ ಕರ್ಣನೂ ಕೂಡ ಮಹಾಪುರುಷರಲ್ಲಿ ಒಬ್ಬನಾಗಿ ಕಾಣುವ ರೀತಿಯಲ್ಲಿ ಕರ್ಣ ಎದುರಿಸುವ ಧರ್ಮ ಸಂಕಟಗಳು ಬೇರೆಲ್ಲಾ ಮಹಾಪುರುಷರಿಗಿಂತ ವಿಭಿನ್ನವಾಗಿ ಕಾಣುವ ಅವನ ಮಾನವೀಯತೆ ಆತನ ವ್ಯಕ್ತಿತ್ವವನ್ನು ಉನ್ನತ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದರೆ ಅತಿಶಯೋಕ್ತಿ ಇಲ್ಲ.

ಕುಮಾರವ್ಯಾಸನ ದೃಷ್ಟಿಯಲ್ಲಿ ಕರ್ಣನ ಪಾತ್ರವನ್ನು ಹಾಗೂ ಮಾನವೀಯ ಮೌಲ್ಯವನ್ನ ಚರ್ಚಿಸುವುದಾದರೆ ಮೊದಲಿಗೆ ಕರ್ಣನ ಜನನದ ಸನ್ನಿವೇಶವನ್ನು ಈ ಸಂದರ್ಭದಲ್ಲಿ ಮೊದಲಿಗೆ ಚರ್ಚಿಸಬೇಕಾಗುತ್ತದೆ.

## KEYWORDS:

ಸ್ವಾಮಿಭಕ್ತಿ, ಸೂತಭವನ, ಉಗ್ರಶಾಪ, ಸುಸಂಗತವಾಗಿದೆ, ಪಟ್ಟಾಭಿಷೇಕ, ಸೂತಕುಲ, ಗಾಲಿಯನಲುಗಿ, ಕೀಲಚ್ಚಿನಲಿ, ಮುಂಗೈಕೊಟ್ಟು, ತಿವಿದು.

**ಪೀಠಿಕೆ:** ಕುಮಾರವ್ಯಾಸ ಭಾರತದಲ್ಲಿ ಅನೇಕ ಮಹಾಪುರುಷರು ತಮ್ಮದೇ ಆದ ತೇಜಸ್ಸಿನಿಂದ ಕಂಗೊಳಿಸಿದ್ದರೂ ಬೇರೆಯವರಲ್ಲಿ ಕಾಣಲಾಗದ ವಿಶಿಷ್ಟವಾದ ಜ್ಞಾನ, ಮಾನವೀಯತೆ ಮತ್ತು ಕರುಣೆ ಹಾಗೂ ಸ್ನೇಹ ಹಾಗೂ ಸ್ವಾಮಿಭಕ್ತಿ ಎಲ್ಲಿಯೂ ಕೂಡ ದಕ್ಕೆ ಬರದ ಹಾಗೆ ನಡೆದುಕೊಳ್ಳುತ್ತಾನೆ. ಕುಮಾರವ್ಯಾಸನ ದೃಷ್ಟಿಯಲ್ಲಿ ಕರ್ಣನೂ ಕೂಡ ಮಹಾಪುರುಷರಲ್ಲಿ ಒಬ್ಬನಾಗಿ ಕಾಣುವ ರೀತಿಯಲ್ಲಿ ಕರ್ಣ ಎದುರಿಸುವ ಧರ್ಮ ಸಂಕಟಗಳು ಬೇರೆಲ್ಲಾ ಮಹಾಪುರುಷರಿಗಿಂತ ವಿಭಿನ್ನವಾಗಿ ಕಾಣುವ ಅವನ ಮಾನವೀಯತೆ ಆತನ ವ್ಯಕ್ತಿತ್ವವನ್ನು ಉನ್ನತ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದರೆ ಅತಿಶಯೋಕ್ತಿ ಇಲ್ಲ.

ಕುಮಾರವ್ಯಾಸನ ದೃಷ್ಟಿಯಲ್ಲಿ ಕರ್ಣನ ಪಾತ್ರವನ್ನು ಹಾಗೂ ಮಾನವೀಯ ಮೌಲ್ಯವನ್ನ ಚರ್ಚಿಸುವುದಾದರೆ ಮೊದಲಿಗೆ ಕರ್ಣನ ಜನನದ ಸನ್ನಿವೇಶವನ್ನು ಈ

ಸಂದರ್ಭದಲ್ಲಿ ಮೊದಲಿಗೆ ಚರ್ಚಿಸಬೇಕಾಗುತ್ತದೆ.

**ಕರ್ಣನ ಜನನ:** ಕರ್ಣನ ಜನನವಾಗುವುದು ಹುಡುಗಾಟಿಕೆಯ ಮೂಲಕ. ಅದಕ್ಕೆ ಯಾರ ಸಂಕಲ್ಪವೂ ಕೂಡ ಇರುವಂತೆ ಕಾಣುವುದಿಲ್ಲ. ಕುಮಾರಿಯಾದ ಕುಂತಿಯು ಗೊಂಬೆಯಾಟಕ್ಕಾಗಿ ನಿಜವಾದ ಮಗುವನ್ನು ತರುತ್ತೇನೆಂದು ದೂರ್ವಾಸರು ಕೊಟ್ಟ ಮಂತ್ರವನ್ನು ಧ್ಯಾನಿಸಿ ಸೂರ್ಯನನ್ನು ಸ್ಮರಿಸುತ್ತಾಳೆ. ಸೂರ್ಯನು ಋಷಿಗಳಿಗೆ ಹೆದರಿ ಕೆಳಗಿಳಿದು ಬಂದು ಕನ್ಯಾ ಸ್ಪರ್ಷವನ್ನು ಮಾಡುತ್ತಾನೆ. ಕರ್ಣನ ಜನನವಾಗುತ್ತದೆ.

**"ಅಳುವ ಶಿಶುವನು ತೆಗೆದು ತೆಕ್ಕಯ**
**ಪುಳಕ ಜಲದಲಿ ನಾದಿ ಹರುಷದೆ**
**ಬಿಳಿಯ ಲಜ್ಜೆಯ ಭಯದ ಹೊರಟಿಗಳುಕಿ ಹಳುವಾಗಿ**
**ಕುಲದ ಸಿರಿ ತಪ್ಪುವುದಲಾ ಸಾ**
**ಕಿಳುಹ ಬೇಕೆಂದೆನುತ ಗಂಗಾ**
**ಜಲದೊಳಗೆ ಹಾಯ್ಕಿದಳು ಜನಪವಾದ ಬೀತಿಯಲಿ"**

**। ಗದುಗಿನ ಭಾರತ 3–21**

ಕುಂತಿಯು ಕುಲದ ಕೀರ್ತಿಯನ್ನು ಕಾಪಾಡುವುದಕ್ಕಾಗಿ ಆ ಮಗುವನ್ನ ಗಂಗೆಯಲ್ಲಿ ತೇಲಿಬಿಡುತ್ತಾಳೆ. ಆದರೆ ಆ ಸಂದರ್ಭದಲ್ಲಿ ಹೆತ್ತತಾಯಿ ಕೈಬಿಟ್ಟರೂ ಲೋಕದ ತಾಯಿ ಜಾಹ್ನವಿ ಆ ಮಗುವನ್ನು ದಡಸೇರಿಸುತ್ತಾಳೆ. ತಾಯಿಯ ಪ್ರೀತಿಯಿಂದ ವಂಚಿತವಾದ ಮಗು ಸೂತನ ಮಡದಿ ರಾಧೆಯ ಮಡಲಿಗೆ ಬಂದು ಸೇರುತ್ತದೆ. ಅರಮನೆಯಲ್ಲಿ ಬೆಳೆಯಬೇಕಾದ ಮಗು ಸೂತಭವನದಲ್ಲಿ ಬೆಳೆಯಬೇಕಾಗುತ್ತದೆ.

'ರವಿನಂದನನು ರಾಧೆಯ ನಾಮದಲಿ' ಮುಂದೆ ಆ ಮಗು ಸೂತಪುತ್ರನಾಗಿ ಅನುಭವಿಸುವ ನೋವುಗಳು ಮಾನವೀಯತೆಯ ಮೌಲ್ಯವನ್ನು ಎತ್ತಿಹಿಡಿಯುತ್ತವೆ. ಅಂದು ಕುಂತಿಯು ನಿಜವನ್ನು ಹೇಳಿದ್ದರೆ ಕರ್ಣನ ಕಥೆಯೇ ಬೇರೆಯಾಗಿರುತ್ತಿತ್ತು.

ವಿವಾಹಕ್ಕೆ ಮೊದಲೆ ಮಗುವಿಗೆ ಜನನ ನೀಡಿದ್ದಾಳೆಂದು ಸಮಾಜದಲ್ಲಿ ನನ್ನ ಮಾನ ಹಾಗೂ ಕುಲಕ್ಕೆ ಕಳಂಕ ಬರುವುದೋ ಎಂದು ಹೆದರಿ ಸ್ವಾರ್ಥ ಭಾವನೆಯಿಂದ ಕುಂತಿ ಮಗುವನ್ನು ಬಿಡುತ್ತಾಳೆ. ಅಖಂಡಭೂಮಂಡಲದ ರಾಜನಾಗಿ ಮೆರೆಯಬೇಕಾದವನು ಸೂತಪುತ್ರನಾಗಿ ರಾದೇಯನಾಗಿ ಕಾಲವನ್ನು ಕಳೆಯಬೇಕಾಗುತ್ತದೆ.

**ಕರ್ಣನ ವಿದ್ಯಾಭ್ಯಾಸ:** ಸೂತ ಪುತ್ರನಾಗಿ ಕರ್ಣನು ಬೆಳೆದು ದೊಡ್ಡವನಾದ ಮೇಲೆ ವಿದ್ಯೆಕಲಿಯುವ ಸಂದರ್ಭದಲ್ಲಿ ಅವನು ಅನುಭವಿಸುವ ನೋವುಗಳು, ಮಾನವೀಯ ಮೌಲ್ಯಗಳನ್ನು ಕೆಣಕುವಂತಿದ್ದು, ಬೆಳೆದ ನಂತರ ಪರಶುರಾಮರಲ್ಲಿ ಅಸ್ತ್ರ ವಿದ್ಯೆಯನ್ನು ಕಲಿಯಲು ಹೋಗುತ್ತಾನೆ. ವಿದ್ಯೆ ಕಲಿತ ನಂತರ ಆ ಮುನಿಯ

ಉಗ್ರಶಾಪದಿಂದ ಭಿನ್ನನಾಗಿ ತನ್ನ ಭವನಕ್ಕೆ ಬಂದು ದ್ರೋಣ ಗರುಡಿಯನ್ನೇ ಪ್ರವೇಶಿಸಿ ತನ್ನ ಪರಾಕ್ರಮವನ್ನು ಪ್ರದರ್ಶನ ಮಾಡುತ್ತಾನೆ. ಆ ಸಂದರ್ಭದಲ್ಲಿ ಕುಂತಿಯು ತನ್ನ ಮಗನೆಂದು ಹೇಳಲಾಗದೆ ಮನದಲ್ಲಿ ಹೆಮ್ಮೆಯನ್ನು ಪಡುತ್ತಾ ಮುಖ ಅರಳಿಸಿಕೊಂಡು ನೋಡುತ್ತಾಳೆ. ಆ ಸಂದರ್ಭದಲ್ಲಿಯೂ ಕೂಡ ಕರ್ಣ ತನ್ನ ಎಲ್ಲೆಯನ್ನು ಎಲ್ಲೂ ಮೀರುವುದಿಲ್ಲ. ಜನಪವಾದ ಮತ್ತೆ ಅವನನ್ನು ಕಾಡುತ್ತದೆ. ಕಲಿಯುವ ಕುತೂಹಲವಿದ್ದರೂ, ಸಾಮರ್ಥ್ಯವಿದ್ದರೂ ಕೂಡ, ಮೂಲ ಕ್ಷತ್ರಿಯನಾಗಿದ್ದರೂ, ನಿಂದನೆಗಳನ್ನು ಅನುಭವಿಸಬೇಕಾಗುತ್ತದೆ. ಅರ್ಜುನನ ಬಾಣಗಳಿಗೆ ಸಮನಾದ ಉತ್ತರವನ್ನು ಕೊಡುತ್ತಾನೆ. ಅರ್ಜುನನಿಗೆ ಸರಿಸಮನಾಗಿ ತನ್ನ ಶೌರ್ಯವನ್ನು ತೋರಿಸುತ್ತಾನೆ. ಆದರೆ ಸೂತಕುಲದವನೆಂದು ಕರ್ಣನನ್ನು ಹೀಯಾಳಿಸುವ ಪರಿಯನ್ನು ಗಮನಿಸಿದರೆ ಎಂತಹ ಮನಸ್ಸಿಗೂ ಕೂಡ ನೋವಾಗುತ್ತದೆ. ಎಲ್ಲರ ಮುಂದೆ ಕರ್ಣ ತಲೆತಗ್ಗಿಸಬೇಕಾಗುತ್ತದೆ. ಆ ಸಂದರ್ಭದಲ್ಲಿಯೂ ಕುಂತಿ ಕರ್ಣನನ್ನು ತನ್ನ ಮಗನೆಂದು ಒಪ್ಪಿಕೊಳ್ಳಬಹುದಿತ್ತು ಆದರೆ ಕುಲದ ಗೌರವ ಅವಳ ಬಾಯಿಯನ್ನು ಕಟ್ಟಿಹಾಕಿತ್ತು. ಎಲ್ಲರ ಮುಂದೆ ಕರ್ಣನನ್ನು ತನ್ನ ಮಗನೆಂದು ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿ ಇರಲಿಲ್ಲ.

**ಕರ್ಣನ ಜನ್ಮರಹಸ್ಯ:** ಕರ್ಣನ ಜನ್ಮ ರಹಸ್ಯದ ವಿಚಾರವಾಗಿ ಹೇಳುವುದಾದರೆ ಕುಮಾರವ್ಯಾಸನ ಕಥಾನಾಯಕನಾದ ಶ್ರೀ ಕೃಷ್ಣನಿಗೂ ಹಾಗೂ ತಾಯಿ ಕುಂತಿಗೂ ತಿಳಿದಿರುತ್ತದೆ. ಕುಂತಿಗೆ ಅದೆಷ್ಟುಬಾರಿ ಕರ್ಣ ತನ್ನ ಮಗನೆಂದು ಹೇಳುವ ಅವಕಾಶಗಳು ಲಭ್ಯವಾದರೂ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ಅವಳ ರಹಸ್ಯ ಅವಳಲ್ಲೆ ಉಳಿಯುತ್ತದೆ. ಪಾಂಡವ ಕೌರವರ ನಡುವೆ ಯುದ್ಧದ ಮತ್ಸರ ಆಕೆಯ ಅತಿರೇಖಕ್ಕೆ ಏರಿದ ಸಂದರ್ಭದಲ್ಲಿ ಸಂದಿಗಾಗಿ ಹೋಗಿದ್ದ ಕೃಷ್ಣ ಕಾರ್ಯವನ್ನು ಬೇಕೆಂದೆ ಮುರಿದು ಬಿಡುತ್ತಾನೆ. ಹೊರಗೆ ಬರುವಾಗ ಕೃಷ್ಣನು ಕರ್ಣನನ್ನು ಜೊತೆಗೆ ಕರೆದುಕೊಂಡು ಬಂದು ಅತ್ಯಂತ ಹೆಚ್ಚು ಸಲಿಗೆಯಿಂದ ತನ್ನ ರಥದಲ್ಲಿ ಕುಳ್ಳಿರಿಸಿಕೊಳ್ಳುವ ಪರಿಯನ್ನ ಗಮನಿಸಿದರೆ ಅಂದೇ ಕರ್ಣನ ಅಂತ್ಯದ ಸೂಚನೆಗಳನ್ನು ನೀಡುತ್ತಾನೆ. ಮಾನಸಿಕವಾಗಿ ಕರ್ಣನ ಹತ್ಯೆಯೂ ಕೂಡ ಆಗುತ್ತದೆ.

**ಬೇದವಿಲ್ಲದೆ ಕರ್ಣ ನಿಮ್ಮೊಳೆ**
**ಯಾದವರು ಕೌರವರೊಳಗೆ ಸಂ**
**ವಾದಿಸುವಡನ್ವಯದ ಮೊದಲೆರಡಿಲ್ಲ ನಿನ್ನಾಣೆ**
**ಮೇದಿನಿಪತಿ ನೀನು ಚಿತ್ತದೊ**
**ಳಾದುದರಿವಿಲ್ಲೆನುತ ದಾನವ**
**ಸೂತನದು ರವಿಸುತನ ಕಿವಿಯಲಿ ಬಿತ್ತಿದನು ಭಯವ**

**। ಗದುಗಿನ ಭಾರತ 10–3**

ಕೃಷ್ಣನು ಸಂಧಿ ಕಾರ್ಯವನ್ನು ಮುರಿದು ಕರ್ಣನನ್ನ ಜೊತೆಗೆ ಕರೆದುಕೊಂಡು

ಬಂದು ಕರ್ಣನ ಜನ್ಮರಹಸ್ಯವನ್ನು ತಿಳಿಸುತ್ತಾನೆ. ನಮ್ಮ ನಿಮ್ಮ ಹಾಗೂ ಕೌರವರ ನಡುವೆ ಯಾವುದೇ ಬೇದವಿಲ್ಲ ಎಂದು ಹೇಳುತ್ತ ಕೃಷ್ಣನು ಕರ್ಣನ ಕುಲ ಬಲ ವೈಭವಗಳ ಸಾರ ಸಂಗತಿಯ ಸತ್ಯತೆಯನ್ನು ಕರ್ಣನಿಗೆ ತಿಳಿಸಿ ಅವನ ಮನಸ್ಸಿನಲ್ಲಿ ಭಯವನ್ನು, ವ್ಯಾಕುಲತೆಯನ್ನು ಹುಟ್ಟಿಸುತ್ತಾನೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಸಂಗತಿಯೆಂದರೆ ಕೃಷ್ಣ ಎಷ್ಟೇ ಆಸೆ ಆಮಿಷಗಳನ್ನು ತೋರಿಸಿದರೂ ಕೂಡ ತನ್ನ ಸ್ವಾಮಿನಿಷ್ಠೆಯನ್ನೆ ಮರೆಯದೆ ಉಳಿದು ಕೃಷ್ಣನಿಗೂ ಗೌರವವನ್ನು ಕೊಡುತ್ತಾನೆ. ಆ ಸಂದರ್ಭದಲ್ಲಿ ಕರ್ಣನ ಮಾನವೀಯತೆಯ ಗುಣದ ಮಾತುಗಳನ್ನು ಸಹ ನಾವು ಸ್ಮರಿಸಬಹುದು. 'ಕೌರವೇಂದ್ರನ ಕೊಂದೆ ನೀನೆಂದ' ಎಂಬ ಮಾತನ್ನ ಕರ್ಣ ಹೇಳುತ್ತಾನೆ. ಅಷ್ಟಲ್ಲದೆ "ನಿನ್ನಯ ವೀರರೈವರ ನೋಯಿಸೆನು ರಾಜೀವಸಖನಾಣೆ" ಎಂಬ ಭಾಷೆಯನ್ನು ಕೂಡ ಕೃಷ್ಣನಿಗೆ ಕರ್ಣ ಕೊಡುತ್ತಾನೆ. ಕುಮಾರವ್ಯಾಸನ ಪಾತ್ರ ಚಿತ್ರಣದಲ್ಲಿ ಕರ್ಣ ಈ ಸಂದರ್ಭದಲ್ಲಿ ಕಥಾನಾಯಕನಾದ ಶ್ರೀಕೃಷ್ಣನಿಗಿಂತಲೂ ಮಹಾಪುರುಷನಾಗಿ ಕಂಡುಬರುತ್ತಾನೆ. ನಂತರ ತಾಯಿ ಕುಂತಿಮಾತೆಯನ್ನು ಭೇಟಿಯಾಗುವ ಸಂದರ್ಭದಲ್ಲಿ ಮಗನ ಬಳಿ ತನ್ನ ಮಕ್ಕಳ ಪ್ರಾಣಭಿಕ್ಷೆಯನ್ನು ಬೇಡುವ ಪರಿಯನ್ನು ಗಮನಿಸಿದರೆ ಕರ್ಣನ ಮನಸ್ಥಿತಿ ಏನಾಗಿರಬಹುದೆಂದು ಆಲೋಚನೆ ಮಾಡಬೇಕಾಗುತ್ತದೆ. ಕುಂತಿ ಈಗಲೂ ಕೂಡ ಕರ್ಣನಿಗಾಗಿ ಬಂದಿಲ್ಲ. ತನ್ನ ಐದುಜನ ಮಕ್ಕಳನ್ನು ಉಳಿಸಿಕೊಳ್ಳಲು ಬಂದಿರುವ ಸಂಗತಿಯನ್ನು ತಿಳಿದು ತನ್ನ ಜನ್ಮದ ಬಗ್ಗೆ ತಾನೆ ಅಸಹ್ಯಪಟ್ಟುಕೊಳ್ಳುವ ಅವನ ಮಾನಸಿಕ ಪರಿಸ್ಥಿತಿ ಎಂತವರಲ್ಲೂ ಕರುಣೆಯನ್ನು ಉಂಟುಮಾಡುತ್ತದೆ. 'ಹೋದ ಬಾಣವ ಮರಳಿತೊಡದಿರು' ಎಂದು ಕೇಳಿದ ಕುಂತಿಗೆ "ತೊಟ್ಟ ಬಾಣವನ್ನು ಮತ್ತೆ ತೊಡುವುದಿಲ್ಲ" ಎಂದು ಮಾತನ್ನು ಕೊಡುತ್ತಾನೆ. ಕುಂತಿಯ ದುಃಖ ಕಣ್ಣೀರಾಗಿ ಹರಿಯುತ್ತದೆ. ಅದೇ ಸಂದರ್ಭದಲ್ಲಿ ಸೂರ್ಯನು ಕೂಡ ಕರ್ಣನಿಗೆ ತಾಯಿ ಕುಂತಿಗೆ ಮರುಳಾಗ ಬೇಡ ಎಂದು ಎಚ್ಚರಿಕೆಯನ್ನು ಕೊಡುತ್ತಾನೆ. ಈ ಸಂದರ್ಭದಲ್ಲಾದರೂ ಕುಂತಿ ತನ್ನ ಮಕ್ಕಳಿಗೆ ಕರ್ಣ ಯಾರು ಎಂಬ ವಿಷಯವನ್ನು ಹೇಳಬಹುದಿತ್ತು. ಆದರೆ ಅವಳು ಬಂದಿರುವುದು ಮುರಹರನ ಮತದಿಂದ. ಆದ್ದರಿಂದ ಕುಂತಿಯು ಕರ್ಣನ ಬಳಿ "ಮಗನೇ ತಮ್ಮಂದಿರನ್ನ ಪಾಲಿಸಿ ಹೋದ ಬಾಣವ ಮರಳಿತೊಡದಿರು" ಎಂದಿಷ್ಟನ್ನು ಮಗನಾದ ಕರ್ಣನನ್ನು ಬೇಡಿ ಮರೆಯಾಗಿ ಹೋಗುತ್ತಾಳೆ. ಹಾಗೆಯೇ ತಾಯಿಯ ಬೇಡಿಕೆಯನ್ನು ಮುಖ್ಯವಾಗಿ ತೆಗೆದುಕೊಳ್ಳುತ್ತಾನೆ. ವಿಷ್ಣುಸ್ವರೂಪಿಯಾದ ಕೃಷ್ಣನ ಸಂಕಲ್ಪವೇ ಬೇರೆಯಾಗಿರುತ್ತದೆ. ಕರ್ಣನಲ್ಲಿ ಕರುಣೆ, ಮಾನವೀಯತೆ ಲಕ್ಷಣಗಳು ತನ್ನ ಸಾವನ್ನ ಹೇಗೆ ಹಂತ ಹಂತವಾಗಿ ಸ್ವೀಕರಿಸುತ್ತವೆ ಎಂಬ ಅರಿವು ಕೃಷ್ಣ ಮತ್ತು ಕುಂತಿಯ ಭೇಟಿಯಲ್ಲಿ ಗೋಚರಿಸುತ್ತದೆ. ಕರ್ಣನು ಉದ್ಯೋಗ ಪರ್ವದಲ್ಲಿ ಸತ್ಯವಂತಿಕೆ, ಸ್ವಾಮಿ ನಿಷ್ಠೆಯನ್ನು ತೋರಿಸುತ್ತಾನೆ. ದುಷ್ಟರಲ್ಲಿ ನಿಷ್ಠೆ ಸಹಜ. ಆದರೆ ಸತ್ಯವಂತಿಕೆ ಹೃದಯ ಪರಿವರ್ತನವಾಗದ ಸಹಜವೇ. ದುರ್ಯೋಧನನಲ್ಲಿ

ನಿಷ್ಠೆಯುಳ್ಳ ಕರ್ಣನು ಯುದ್ಧದಲ್ಲಿ ಪಾಂಡವರನ್ನು ನೋಯಿಸಲಾರನೆಂದು, ಬಿಟ್ಟ ಬಾಣವನ್ನು ಮತ್ತೆ ಬಿಡುವುದಿಲ್ಲವೆಂದೂ ಕೃಷ್ಣ ಕುಂತಿಯರಿಗೆ ವಚನ ಕೊಟ್ಟು ಅದರಂತೆ ನಡೆಯುತ್ತಾನೆ. ಕುಮಾರವ್ಯಾಸನ ದೃಷ್ಟಿಯಲ್ಲಿ ಸಾಹಿತ್ಯದ ದೃಷ್ಟಿಗಿಂತ ಭಕ್ತಿ ಮಾರ್ಗದ ದೈವಿಕ ಭಾವನೆಯೆ ಎದ್ದುಕಾಣುತ್ತದೆ. ಆದ್ದರಿಂದ, ಸುಸಂಬಂಧ ಪಾತ್ರ ರಚನೆಯನ್ನು ಅಪೇಕ್ಷಿಸುವುದು ಸರಿಯಾಗಲಾರದು. ಈ ಮುಂದೆ ಪಂಪನ ಮತ್ತು ವ್ಯಾಸನ ಕರ್ಣನೊಡನೆ ಹೋಲಿಸಿ ಪಂಪ-ಕುಮಾರವ್ಯಾಸರಿಗಿಂತಲೂ ವ್ಯಾಸನ ಚಿತ್ರವೂ ಹೆಚ್ಚು ಸುಸಂಗತವಾಗಿದೆ ಎಂದು ಇವರು ಬಿತ್ತರಿಸಿ ತೋರಿದ್ದಾರೆ.

ಕರ್ಣ-ಕುಂತಿಯ ಬೇಟಿಯ ಕಾಲದಿಂದ ಕರ್ಣನು ಸಂಕಷ್ಟದ ಸುಳಿಗೆ ಸಿಕ್ಕಿ ಸ್ವಾಮಿ ನಿಷ್ಠೆಯನ್ನು ತೋರಿದನು. "ಬಂದು ಪ್ರೇಮವನ್ನು ಮೆರೆದನು". ಸಮಾನ ಕರ್ತವ್ಯಗಳ ಕರೆ ಒಮ್ಮೆಲೇ ಕೇಳಿಬರಲು ಧರ್ಮ ಸಂಕಟದಲ್ಲಿ ಸಿಲುಕಿದ ಎಂಥ ಗಟ್ಟಿಗರೂ ಒಂದು ಕ್ಷಣವಾದರೂ ಗೊಂದಲಬಡಕರೂ ಆಗುತ್ತಾರೆ. (ಕನ್ನಡ ಸಾಹಿತ್ಯ ಚರಿತ್ರೆ ಪುಟ: 231)

ಕರ್ಣನ ಬಾಳನ್ನು ಬರಿದು ಮಾಡುವುದಕ್ಕೆ ಅವನಿಗೆ ಸೇರಿದ ಮಾನವ ವ್ಯಕ್ತಿತ್ವಗಳಷ್ಟೇನು ಮಹತ್ತರ ನಿಮಿತ್ತಗಳಲ್ಲ. ಋಷಿಗಳು, ದೇವತೆಗಳು ಸಹ ಯಾವುದೊ ಅಂತರ್ಗಾಮಿಯಾದ ಶಕ್ತಿಗೆ ವಶರಾಗಿ ಅವನ ತೇಜವನ್ನು ಕುಂದಿಸಲು ತೊಡಗಿದರು. ಕರ್ಣ ತನ್ನ ಬಾಳಿನಲ್ಲಿ ನೋವನ್ನು ಕಂಡಿದ್ದು ಅನಿರೀಕ್ಷಿತವಾಗಿ ಬಂದೊದಗಿದ ದುರ್ಯೋಧನನ ಮೈತ್ರಿಯ ಶಸ್ತ್ರ ವಿದ್ಯೆ ಪ್ರಯೋಗದ ಪ್ರದರ್ಶನದಲ್ಲಿ ಎಲ್ಲರೂ ಸೂತಪುತ್ರನೆಂದು ಹೀಯಾಳಿಸಿದಾಗ ಕೌರವನು ಮುಂದೆ ಬಂದು ಕರ್ಣನಿಗೆ ಅಂಗದೇಶದ ರಾಜ ಪಟ್ಟಾಭಿಷೇಕವನ್ನು ಮಾಡುತ್ತಾನೆ. ತನ್ನನ್ನು ಉದ್ದರಿಸಿದ ಕೌರವನಿಗೆ ತನ್ನ ಪ್ರಾಣವನ್ನು ಸ್ವಾಮಿ ನಿಷ್ಠೆಗೆ ಮೀಸಲಾಗಿರಿಸುತ್ತಾನೆ. ಅಂದಿನಿಂದ ಕುಲಹೀನನೆಂಬ ಕೊಂಡಿ ಸ್ವಲ್ಪ ಕಳಚಿತು. ಆದರೂ ಕೂಡ ಕೃಷ್ಣ – ಕುಂತಿಯರ ಭೇಟಿಯ ಸಮಯದಲ್ಲಿ ಅವರಿಗೆ ವಚನವನ್ನು ಕೊಟ್ಟು ಕೃಷ್ಣನಿಗೆ 'ಕೌರವೇಂದ್ರನ ಕೊಂದ ನೀನೆಂದ' ಎಂದು ಹೇಳಿದರೂ ವೀರ ಕೌರವರಾಯನೇ ದಾತಾರ ಎಂದು ಹೇಳುತ್ತಾನೆ. ದುರ್ಯೋಧನನಿಗೆ ಒಡ ಹುಟ್ಟಿದವರು ನೂರುಮಂದಿ ಇದ್ದರೂ ಕೂಡ ಕರ್ಣನ ಮೇಲೆ ಅಪಾರವಾದ ಪ್ರೀತಿ ಸ್ನೇಹ ಎದ್ದುಕಾಣುತ್ತವೆ.

ಕುಮಾರವ್ಯಾಸನು ಭಕ್ತಿಗೆ ಅತಿಹೆಚ್ಚು ಮಹತ್ವವನ್ನು ನೀಡಿದ್ದಾನೆ. ತನ್ನ ಕಥಾನಾಯಕನಾದ ಕೃಷ್ಣನೇ ಕರ್ಣನ ಜೀವನವನ್ನು ಸಾರ್ಥಕಗೊಳಿಸಿದ ಶಕ್ತಿ ಎಂದು ಬಣ್ಣಿಸುತ್ತಾನೆ. ಪಾಂಡವರನ್ನು ರಕ್ಷಿಸುವುದು ಅವನ ಸ್ಥಿರ ಸಂಕಲ್ಪವಾಗಿತ್ತು. ಸತ್ಯಾಸತ್ಯತೆಗೆ ತಲೆತೂಗಿದನು. ಮೆಚ್ಚಿದನು, ಮಾರುಹೋದನು. ಕರ್ಣನ ಮನಸ್ಸನ್ನು ಪರೀಕ್ಷಿಸುವ ಸಂದರ್ಭದಲ್ಲಿ ಶ್ರೀ ಕೃಷ್ಣ ಕರ್ಣನ ಘನತೆಯನ್ನು ಲೋಕಕ್ಕೆ ಸಾರಿದ್ದಾನೆ. ಕರ್ಣನ ಕುಲವನ್ನು ಎಚ್ಚರಿಸುತ್ತಾನೆ. ಅಷ್ಟೆ ಅಲ್ಲದೆ ಕೃಷ್ಣನು ಕರ್ಣ ನಿನ್ನ

ಅಭ್ಯುದಯವನ್ನೆ ಬಯಸುವೆನು. ನೀಸುಖಿಯಾಗು ಎಂಬ ಎರಡರ್ಥದ ಮಾತುಗಳು ಕೃಷ್ಣನವು.

**ಕರ್ಣ ಅರ್ಜುನರ ಕಾಳಗದ ಕ್ರೂರ ಭಯಾನಕ ದೃಶ್ಯ:**

ಕರ್ಣ – ಅರ್ಜುನರ ಕಾಳಗದ ಸಂದರ್ಭದಲ್ಲಿ ಸರ್ಪಾಸ್ತ್ರ ಕರ್ಣನ ಸತ್ಯಸಂಧತೆಯನ್ನು ಕಂಡು ನಿಶ್ಚಲವಾಗಿ ಹೊರಟುಹೋಯಿತು. ರಕ್ತ ಪ್ರವಾಹದಿಂದ ಕೆಸರೆದ್ದ ಭೂಮಿ ಕರ್ಣನ ರಥದ ಗಾಲಿಯನ್ನು ನುಂಗಿತು. ಗಾಲಿಯನಲುಗಿ ಕೀಲಚ್ಚಿನಲಿ ಮುಂಗೈಕೊಟ್ಟು ಮೊಣಕಾಲಿನಲಿ ದರಣಿಯನೂಕಿ ಮುಗ್ಗಿದ ರಥವನು ನೆಗಹುವ ಕರ್ಣನನ್ನು ಕಂಡು ಕೃಷ್ಣ ಅರ್ಜುನನ್ನು ಚಿಮ್ಮಟಿಗೆಯಿಂದ ತಿವಿದು ಎಲೆ ಮರುಳೇ ಗಾಂಡೀವಿ ಆಪತ್ತೆಸಗಿರುವಾಗಲೇ ಹಗೆಯನ್ನು ಕೊಲ್ಲುವುದು ಎಂದು ಪ್ರೋತ್ಸಾಹಿಸಿದನು. ಆ ಸಂದರ್ಭದಲ್ಲಿ ಅರ್ಜುನನೂ ಕೂಡ ಗುಣದಲ್ಲಿ, ನೀತಿಯಲ್ಲಿ, ಮಾತಿನಲ್ಲೀ ಸತ್ವಾತಿಶಯದಲ್ಲಿ ಸೂತಕುಲದಲ್ಲಿ ಕರ್ಣನು ಅದಾರು ಎಂದು ಕೇಳುತ್ತಾನೆ. ಆದರೆ ಕೃಷ್ಣನು ಅರ್ಜುನನನ್ನೇ ಪ್ರಚೋದಿಸಿ ಬಾಣ ಪ್ರಯೋಗಿಸುವಂತೆ ಮಾಡುತ್ತಾನೆ. ಅರ್ಜುನನ ಬಿಲ್ಲು ಎದೆಯಿಂದ ಚಿಮ್ಮಿ ಉರಿಯನ್ನುಗುಳುತ್ತಾ ಬಂದ ಅಂಜಲಿಕಾಸ್ತ್ರ ಅವನ ಎದೆಯನ್ನು ಇರಿದರೂ ಅವನ ಪ್ರಾಣ ಹೋಗಲಿಲ್ಲ. ಮರ್ಮಜ್ನನಾದ ಕೃಷ್ಣನು ಕರ್ಣನೆದೆಯ ಅಮೃತಕಳಸವನ್ನು ಅವನ ಕುಂಡಲ ಸಹಿತವಾಗಿ ಪಡೆದನು. ಇದೇ ಕೃಷ್ಣನು ಕರ್ಣನಿಗೆ ಬಯಸಿದ ಅಭ್ಯುದಯ ಸುಖ. ಕೃಷ್ಣ ಕರುಣೆಯ ಅಸುಳೆಗಳಾದ ಪಾಂಡವರಿಗೂ ದೊರೆಯದ ಪದ ಅವರಿಗಿಂತ ಮುಂಚೆಯೇ ಕರ್ಣನಿಗೆ ದೊರೆಯಿತು.

ಕರ್ಣನ ಪಾತ್ರದಲ್ಲಿ ಕುಮಾರವ್ಯಾಸನು ಆಧ್ಯಾತ್ಮದ ಹೊನ್ನಿನ ಮಳೆಯನ್ನೇ ಕಂಡು ಅವನ ಸೌಂದರ್ಯವನ್ನು, ಸತ್ಯಸಂಧತೆಯನ್ನು ಮತ್ತಷ್ಟು ಉಜ್ವಲಗೊಳಿಸಿದ್ದಾನೆ. ವ್ಯಾಸ – ಪಂಪರಲ್ಲಿ ಕಂಡರಿಸದ ಕರ್ಣ ವಿಗ್ರಹಕ್ಕೆ ಕುಮಾರವ್ಯಾಸ ಆಧ್ಯಾತ್ಮದ ವಜ್ರ ಕಿರೀಟವನ್ನು ತೊಡಸಿದ್ದಾನೆ. ಆದ್ದರಿಂದಲೇ ಕರ್ಣನ ಮೂರ್ತಿ, ತ್ಯಾಗ, ಬಲಿದಾನಗಳು ನಮ್ಮ ಜನತೆಯ ಮುಂದೆ ಹಾಗೂ ಮನಮಂದಿರಗಳಲ್ಲಿ ಶಾಶ್ವತವಾಗಿ ನೆಲೆಸಿವೆ.

**ಉಪಸಂಹಾರ:**

ಕುಮಾರವ್ಯಾಸರ ರಮಣೀಯ ಶೈಲಿ ಹಾಗೂ ಆಧ್ಯಾತ್ಮದ ರೀತಿ ಹಾಗೂ ಭಕ್ತಿ ಪ್ರದಾನವಾದ ತತ್ವಗಳನ್ನು ಮುಂದಿಟ್ಟುಕೊಂಡು ರಚಿಸಿರುವ ಪುಣ್ಯವಂತ ಕವಿ ಎಂದೇ ಹೇಳಬೇಕಾಗುತ್ತದೆ. ವೇದವ್ಯಾಸರನ್ನ ತನ್ನ ಗುರುಗಳೆಂದು ಸ್ವೀಕರಿಸಿ ಕುಮಾರವ್ಯಾಸನೆಂದು ತನ್ನನ್ನು ತಾನೇ ಕರೆದುಕೊಂಡಿದ್ದಾರೆ. ವ್ಯಾಸ ಮತ್ತು ಪಂಪರು ಕಾವ್ಯವನ್ನು ರಚಿಸಿದ್ದರೂ ಕೂಡ ಅವರಿಬ್ಬರಿಗೂ ಮೀರಿ ತನ್ನ ಸಾಮರ್ಥ್ಯವನ್ನೇ ಮೆರೆದಿದ್ದಾನೆ. ಕುವೆಂಪು ಅವರ ನುಡಿಯಂತೆ “ಕುಮಾರವ್ಯಾಸನು ಹಾಡಿದವೆಂದರೆ

ಕಲಿಯುಗ ದ್ವಾಪರವಾಗುವುದು." ಭಾರತ ಕಣ್ಣಲಿ ಕುಣಿಯುವುದು. ಮಿಂಚಿನ ಹೊಳೆ ತುಳುಕಾಡುವುದು ಎಂಬ ಮಾತು ಕಾವ್ಯದ ಮಹತ್ವವನ್ನೆ ಸಾರುತ್ತದೆ. ಪಾತ್ರಗಳ ರಚನೆ, ಶೈಲಿ, ಮಾನವೀಯತೆಯ ಲಕ್ಷಣಗಳು ಕೂಡ ಆಯಾ ಪಾತ್ರಕ್ಕೆ ಅನುಗುಣವಾಗಿ ಕಂಡುಬರುತ್ತದೆ ಹಾಗೂ ಭಕ್ತಿಯ ಪರಕಾಷ್ಠೆಯನ್ನು ಹಾಗೂ ತ್ಯಾಗದ ಗುಣಗಳನ್ನು ಕುಮಾರವ್ಯಾಸನಲ್ಲಿ ನೋಡುತ್ತಿದ್ದೇವೆಂದರೆ ತಪ್ಪಾಗಲಾರದು.

## ಪರಾಮರ್ಶನ ಗ್ರಂಥಗಳು:


1. ಕೃಷ್ಣಕುಮಾರ್ ಸಿ.ಪಿ., (2023), ಗದುಗಿನ ಭಾರತ, ತನು ಮನ ಪ್ರಕಾಶನ, ಮೈಸೂರು.
2. ಕೀರ್ತಿನಾಥ ಕುರ್ತುಕೋಟಿ, (2002), ಕುಮಾರವ್ಯಾಸ, ಸಾಹಿತ್ಯ ಅಕಾಡೆಮಿ, ನವದೆಹಲಿ.
3. ಮುಗಳಿ ರಂ.ಶ್ರೀ., (2018), ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ಕ ಹೌಸ್, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.